20 Years of Celebrating the Arts

India Foundation for the Arts

I F A

## ಕಲಾ ಶಿಕ್ಷಣದಲ್ಲಿ ಆಸಕ್ತಿ ಉಳ್ಳ ಕಲಾವಿದರಿಂದ

# ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್ ಅರ್ಜಿಗಳನ್ನು ಆಹ್ವಾನಿಸಿದೆ

## ಕಡೆಯ ದಿನಾಂಕ: ಮೇ ೧೫, ೨೦೧೫

ಕರ್ನಾಟಕದ ಸರ್ಕಾರಿ ಶಾಲೆಗಳ ಕಲಾ ಶಿಕ್ಷಣ ಯೋಜನೆಯಲ್ಲಿ ಕೆಲಸ ಮಾಡಲಿಚ್ಛಿಸುವ ಕಲಾವಿದರಿಂದ ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್ (ಐ.ಎಫ್.ಎ) ಅರ್ಜಿಗಳನ್ನು ಆಹ್ವಾನಿಸಿದೆ. ಶಿಕ್ಷಕರು ಮತ್ತು ಕಲಾವಿದರ ನಡುವೆ ಸಹಯೋಗದ ಕೊಂಡಿ ಬೆಸೆಯುವ ಘನ ಉದ್ದೇಶದಿಂದ ಈಗಾಗಲೇ ಚಾಲ್ತಿಯಲ್ಲಿರುವ 'ಕಲಿ-ಕಲಿಸು' ಯೋಜನೆಯ ಮುಂದುವರಿಕೆ ಭಾಗವಾಗಿ ಈ ವಿನೂತನ ಚಟುವಟಿಕೆಯನ್ನು ಸಾದರಪಡಿಸಲಾಗುತ್ತಿದೆ.

ಯೋಜನೆಯ ಉದ್ದೇಶಗಳು

- ಕಲಾವಿದರು ತಮ್ಮ ಕಲಾ ಚಟುವಟಿಕೆಗಳಾಚೆಗೆ ಕಲಾ ಶಿಕ್ಷಣದ ಸಾಧ್ಯತೆಗಳ ಬಗ್ಗೆ ದೃಷ್ಟಿಹರಿಸಲು ಪ್ರೇರೇಪಿಸುವುದು.
- ಶಿಕ್ಷಕರು ಮತ್ತು ಕಲಾವಿದರು ಶಾಲಾ ಸಮುದಾಯದಲ್ಲಿ ಜಂಟಿ ಪಾಲುದಾರರಾಗಲು ವೇದಿಕೆ ಕಲ್ಪಿಸುವುದು
- ಕಲಾ ಸಾಧ್ಯತೆಗಳಿಂದ ಪಠ್ಯ ಹಾಗೂ ಭೋದನಾ ಕ್ರಮಗಳನ್ನು ಶ್ರಿಮಂತಗೊಳಿಸುವುದು

ಈ ಚಟುವಟಿಕೆಗೆ ಬೇಕಾದ ಅನುದಾನ ಶೀಘ್ರದಲ್ಲೇ ಮುಂಜೂರಾಗಲಿದೆ. ಯೋಜನೆಯ ಕಾಲಾವಧಿಯ ನಂತರವೂ ಅನುದಾನ ಮುಂದುವರಿಯುವ ನಿರೀಕ್ಷೆ ಇದೆ.

ಯೋಜನೆಯಲ್ಲಿ ಆಸಕ್ತಿ ಉಳ್ಳ ಕಲಾವಿದರು ಏನು ಮಾಡಬೇಕು?

- ಶಾಲಾ ಪರಿಸರದಲ್ಲಿ ಸಾಕಾರಗೊಳಿಸಬಲ್ಲ ಶಿಕ್ಷಣ ಕ್ರಮವನ್ನು ಅಭಿವೃದ್ಧಿಪಡಿಸಿ
- ಆಂತರಿಕ ದಾಖಲೆಗಳಿಗಾಗಿ ಕಾಲಕಾಲಕ್ಕೆ ವರದಿಗಳು, ಛಾಯಾಚಿತ್ರ, ಧ್ವನಿ ಹಾಗೂ ದೃಶ್ಯಾವಳಿಗಳನ್ನು ನೀಡುವುದು
- ಯೋಜನಾ ಕಾಲಾವಧಿಯಲ್ಲಿ ಅನುದಾನದ ನಿರ್ಧಿಷ್ಟ ಚಟುವಟಿಕೆ, ಸಾಧನೆ, ಎದುರಾದ ಸಮಸ್ಯೆಗಳು ಹಾಗೂ ಕಲಿಕೆಯ ಬಗ್ಗೆ ಕಾಲಕಾಲಕ್ಕೆ ವರದಿ ಸಲ್ಲಿಸಬೇಕು. ಅನುಧಾನದ ಅವಧಿಯ ಅಂತ್ಯದಲ್ಲಿ ಹಣಕಾಸಿನ ವಹಿವಾಟಿನ ವರದಿಯೊಂದಿಗೆ ಪ್ರತಿಯೊಂದು ಚಟುವಟಿಕೆಯ ಬಗ್ಗೆ ಸವಿಸ್ತಾರವಾದ ವರದಿ ನೀಡಬೇಕು

### ಅರ್ಜಿ ಸಲ್ಲಿಸುವ ಪ್ರಕ್ರಿಯೆ:

ಈ ವಿನೂತನ ಯೋಜನೆಯ ಬಗೆಗೆ ನಿಮ್ಮ ಯಾವುದೇ ಪ್ರಶ್ನೆಗಳಿಗೆ ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್ ಸಿಬ್ಬಂದಿ ಉತ್ತರ ಕೊಡಲು ಉತ್ಸುಕರಾಗಿದ್ದಾರೆ. **ಏಪ್ರಿಲ್ ೧೫, ೨೦೧೫** ರೊಳಗೆ ನಿಮ್ಮ ವಿಚಾರಗಳನ್ನು ನಮ್ಮೊಂದಿಗೆ ವಿನಿಮಯ ಮಾಡಿಕೊಳ್ಳಬಹುದು ಅಥವಾ ನಿಮ್ಮ ಸಲಹಾ ಸೂಚನೆಗಳೊಂದಿಗೆ ಪ್ರಸ್ತಾವನೆಯನ್ನು ಕಳುಹಿಸಬಹುದು.

**ಮೇ ೧೫, ೨೦೧೫** ರೊಳಗೆ ನಿಮ್ಮ ಅಂತಿಮ ಅರ್ಜಿ ಲಕೋಟೆ ನಮ್ಮ ಕಚೇರಿ ತಲುಪಿರಬೇಕು. ಅರ್ಜಿ ಸಲ್ಲಿಸಿದವರು ಮುಂಬರುವ **ಜೂನ್ ೧೫, ೨೦೧೫** ರೊಳಗೆ ಅನುದಾನದ ನಿರ್ಣಯವನ್ನು ನಿರೀಕ್ಷಿಸಬಹುದು. ನಿಮ್ಮ ಪ್ರಸ್ತಾವನೆ ಕನ್ನಡ, ಹಿಂದಿ, ಉರ್ದು ಅಥವಾ ಇಂಗ್ಲಿಷ್ ಭಾಷೆಗಳಲ್ಲಿ ಕಳುಹಿಸಕೊಡಬಹುದು. ಈ ಯೋಜನಾ ಕಾಲಾವಧಿ ಕನಿಷ್ಟ ೬ ತಿಂಗಳು ಹಾಗೂ ಗರಿಷ್ಟ ೯ ತಿಂಗಳ ಅವಧಿಯದ್ದಾಗಿರುತ್ತದೆ. ಯೋಜನೆಗೆ ಗರಿಷ್ಟ ೧,೫೦,೦೦೦/- ರೂಪಾಯಿಯಷ್ಟು ಅನುದಾನದ ಪ್ರಸ್ತಾವನೆಯನ್ನು ಕಳುಹಿಸಬಹುದು.

ನಿಮ್ಮ ಪ್ರಸ್ತಾವನೆಯಲ್ಲಿ ಏನೆಲ್ಲಾ ಅಡಕವಾಗಿರಬೇಕು

- ಸದ್ಯ ನೀವು ಮಾಡುತ್ತಿರುವ ಚಟುವಟಿಕೆ ಹಾಗೂ ಕಲಾವಿದರಾಗಿ ಸರ್ಕಾರಿ ಶಾಲೆಗಳ ಬಗ್ಗೆ ನಿಮಗಿರುವ ಆಸಕ್ತಿ ಹಾಗೂ ಕಾಳಜಿ.
- ನಿಗಧಿತ ಸರ್ಕಾರಿ ಶಾಲೆಗಾಗಿ ಅಭಿವೃದ್ಧಿಪಡಿಸಿದ ಯೋಜನೆಯ ಪರಿಕಲ್ಪನೆ ಹಾಗೂ ನಿರೀಕ್ಷಿತ ಯೋಜನಾವಧಿ.
- ನಿಮ್ಮ ಕೆಲಸದ ಅವಧಿಯಲ್ಲಿ ಪ್ರಸ್ತಾಪಿತ ಕಾರ್ಯಚಟುವಟಿಕೆಗಳ ವಿವರ ಹಾಗೂ ಅನುಷ್ಠಾನದ ವಿಧಾನದ ಬಗ್ಗೆ ಸಂಪೂರ್ಣ ಚಿತ್ರಣವಿರಬೇಕು.
- ಯೋಜನೆಯ ಅನುಷ್ಠಾನದ ನಂತರ ತಾವು ನಿರೀಕ್ಷಿಸುವ ಫಲಿತಾಂಶವೇನು. ಮತ್ತು ಆ ಫಲಿತಾಂಶ ಕಲಾ ಕ್ಷೇತ್ರಕ್ಕೆ ಹಾಗೂ ಶಿಕ್ಷಣದಲ್ಲಿ ಕಲೆಯ ಸಾಧ್ಯತೆಗಳ ಬಗ್ಗೆ ಯಾವ ರೀತಿ ಕೊಡುಗೆ ನೀಡಬಲ್ಲದು ಎಂಬುದರ ಬಗ್ಗೆ ಪ್ರಸ್ತಾಪಿಸಬೇಕು.
- ಪ್ರಸ್ತಾಪಿತ ಯೋಜನಾ ಕಾಲಾವಧಿಗೆ ಬೇಕಾಗುವ ಖರ್ಚು ವೆಚ್ಚಗಳ (ಆಯವ್ಯಯ) ಸಂಪೂರ್ಣ ವಿವರ.

### ನಿಮಗಿದು ತಿಳಿದಿರಲಿ

- ಉದ್ದೇಶಿತ ಯೋಜನೆಗೆ ಸಂಭಂದಿಸಿದ ಖರ್ಚು ವೆಚ್ಚಗಳಿಗೆ ಮಾತ್ರ ನಮ್ಮ ಅನುದಾನ ಸೀಮಿತವಾಗಿರುತ್ತದೆ. ಉದಾಹರಣೆಗೆ ಕಲಾವಿದನ/ಳ ಗೌರವಧನ (ಹನ್ನೆರಡು ಸಾವಿರ ರೂಪಾಯಿಗಳನ್ನು ಮೀರಿರಬಾರದು), ಇತರೆ ಸಂಪನ್ಮೂಲ ವ್ಯಕ್ತಿಗಳ ಗೌರವಧನ (ಅಗತ್ಯವಿದ್ದಲ್ಲಿ), ಪ್ರಯಾಣ ವೆಚ್ಚ ಮತ್ತು ಪರಿಕರಗಳ ವೆಚ್ಚ. ಯೋಜನೆಯ ಪ್ರತಿ ವಿಭಾಗದಲ್ಲಿ ನಿರ್ಧಿಷ್ಟ ವಸ್ತುಗಳ ವೆಚ್ಚಕ್ಕೆ ಸಂಭಂದಿಸಿದ ವಿವರಗಳಿರಬೇಕು. ನಿಮ್ಮ ಖರ್ಚು ವೆಚ್ಚಗಳ ದಾಖಲೆಗಳ ಲೆಕ್ಕಪರಿಶೋದನೆಗೆಂದು ಗರಿಷ್ಟ ೩೦೦೦ ರೂಪಾಯಿ ದಾಟಬಾರದು.
- ಸಾಂಸ್ಥಿಕ ಖರ್ಚುವೆಚ್ಚಗಳು, ಕಟ್ಟಡ ಇನ್ನಿತರ ವೆಚ್ಚಗಳು ಯೋಜನೆಯಲ್ಲಿ ಒಳಗೊಳ್ಳಬಾರದು.
- ನೀವು ಸಿದ್ದಪಡಿಸಿದ ಯೋಜನೆಯ ಕರಡು ಪ್ರತಿಯನ್ನು ಇ-ಮೇಲ್ ಮುಖಾಂತರ ನಮಗೆ ಕಳುಹಿಸಬಹುದು. ಆದರೆ ಅಂತಿಮ ಪ್ರಸ್ತಾವನೆ ಹಾಗೂ ಅದಕ್ಕೆ ಪೂರಕ ಸಾಮಗ್ರಿಗಳನ್ನೊಳಗೊಂಡ ಲಕೋಟೆ ದಿನಾಂಕ ೨, ಜನವರಿ ೨೦೧೫ ರ ಒಳಗೆ ನಮ್ಮ ಕಚೇರಿ ತಲುಪಬೇಕು.
- ನಿಗದಿತ ಕಾಲಮಿತಿಯೊಳಗೆ ನಿಮ್ಮ ಯೋಜನೆಯ ಅನುಷ್ಠಾನ ಮತ್ತು ಅದಕ್ಕೆ ಪೂರಕ ಮಾಹಿತಿಯನ್ನು ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್ ಗೆ ಒದಗಿಸುವ ಸಂಪೂರ್ಣ ಜವಾಬ್ದಾರಿ ನಿಮ್ಮದೇ ಆಗಿರುತ್ತದೆ. ಸೂಚಿತ ದಿನಾಂಕದ ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
- ನೀವು ಕಳುಹಿಸಿದ ಪ್ರಸ್ತಾವನೆಯ ಬಗ್ಗೆ ಐ.ಎಫ್.ಎ ಆಸಕ್ತಿ ತೋರಿದಲ್ಲಿ ಪ್ರತಿಷ್ಠಾನ ತಿಳಿಸಿದ ದಿನಾಂಕದಂದು ನಮ್ಮ ಸಿಬ್ಬಂದಿಯ ಜೊತೆ ಸಮಾಲೋಚನೆಗೆ ಹಾಜರಾಗಲು ಸಿದ್ದರಿರಬೇಕು.
- ಐ.ಎಫ್.ಎ.ಯಿಂದ ಆಯ್ಕೆಯಾದ ಅಬ್ಯರ್ಥಿಗಳು ಸಂಭದಪಟ್ಟ ಶಾಲೆಯ ಆಡಳಿತ ಮಂಡಳಿಯಿಂದ ಯೋಜಿತ ಕಾರ್ಯಚಟುವಟಿಗಳನ್ನು ಕಾರ್ಯರೂಪಕ್ಕೆ ತರಲು ಲಿಖಿತ ಅನುಮತಿ ಪಡೆದಿರಬೇಕು. ಅಂತಹ ಅಭ್ಯರ್ಥಿಗಳಿಗೆ ಮಾತ್ರ ಅನುದಾನ ನೀಡಲಾಗುವುದು.

### ಅರ್ಹತೆ

- ಸರ್ಕಾರಿ ಶಾಲೆಗಳಲ್ಲಿ ಕಲಾಶಿಕ್ಷಣದ ಬಗೆಗೆ ಕೆಲಸ ಮಾಡಿದ ಅನುಭವವುಳ್ಳವರು ಅರ್ಜಿ ಸಲ್ಲಿಸಬಹುದು. ಸದರಿ ಕಾರ್ಯಕ್ಷೇತ್ರದಲ್ಲಿ ಕೆಲಸ ಮಾಡಲು ಉತ್ಸುಕರಾಗಿದ್ದು ಯಾವುದೇ ಅನುಭವ ಇಲ್ಲದ ಕಲಾವಿದರಿಗೂ ಅವಕಾಶವಿದೆ.
- ಅಭ್ಯರ್ಥಿಗಳು ಕನ್ನಡದಲ್ಲಿ ವ್ಯವಹರಿಸಲು ಬಲ್ಲವರಾಗಿರಬೇಕು.
- ಭಾರತೀಯ ನಾಗರೀಕರು ಅಥವಾ ಭಾರತದಲ್ಲಿ ಕನಿಷ್ಟ ಐದು ವರ್ಷಗಳಿಂದ ವಾಸವಾಗಿರುವವರಿಗೆ ಮಾತ್ರ ಅವಕಾಶ.

ನಿಮ್ಮ ಅರ್ಜಿ, ಪ್ರಸ್ತಾವನೆ ಅಥವಾ ಪ್ರಶ್ನೆಗಳನ್ನು anupamaprakash@indiaifa.org ಗೆ ಕಳುಹಿಸಲು ಕೋರಲಾಗಿದೆ.

ಅನುಪಮಾ ಪ್ರಕಾಶ್
**ಕಲಾ ಶಿಕ್ಷಣ**
ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್, (ಅಪೂರ್ವ)
ನೆಲ ಮಹಡಿ, ನಂ ೨೬೯, ೪ ನೆಯ ಅಡ್ಡ ರಸ್ತೆ, ರಾಜಮಹಲ್ ವಿಲಾಸ್, ಎರಡನೆಯ ಹಂತ, ಎರಡನೆಯ ಬ್ಲಾಕ್, ಬೆಂಗಳೂರು - ೫೬೦ ೦೯೪
ದೂರವಾಣಿ: ೦೮೦-೨೩೪೧ ೪೬೮೧/ ೮೨

**ಈ ಯೋಜನೆಯ ಅನುದಾನ ಗೋಥೆ ಇನ್ಸ್ಟಿಟ್ಯೂಟ್, ಮ್ಯಾಕ್ಸ್ ಮುಲ್ಲರ್ ಭವನ, ಬೆಂಗಳೂರು**

ಹೆಚ್ಚಿನ ಮಾಹಿತಿಗಾಗಿ ಕಲಿ-ಕಲಿಸು ಸಂಪರ್ಕಜಾಲದಲ್ಲಿ ಪಡೆಯಬಹುದು http://www.indiaifa.org/programmes/arts-education.html